ದಿನಾಂಕಃ 28.07.2025

ಅಸಲುದಾವೆ 48/2015

ಡಿ.ಡಬ್ಲ್ಯೂ: 3

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ದಾವ ಸಿ ಶೆಡ್ಯೂಲ್ ಸ್ವತ್ತಿನಲ್ಲಿ ನೀವು 5 ಗುಂಟೆ ಜಮೀನನ್ನು ಯಾರಿಂದ ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿ ಆರ್.ಶ್ರೀನಿವಾಸ್ ರಾವ್ ರವರಿಂದ ಖರೀದಿಸೇದ್ದೇನೆ ಎಂದು ಉತ್ತರಿಸುತ್ತಾರೆ. ಸದರಿ ಆರ್.ಶ್ರೀನಿವಾಸ್ ರಾವ್ ರವರಿಗೆ ಮೇಲೆ ಹೇಳಿದ ಸ್ವತ್ತನ್ನು ದಾಸ ಶೆಟ್ಟರು ಮಾರಾಟ ಮಾಡಿದ್ದಾರೆ. 1975 ನೇ ಇಸವಿಯಲ್ಲಿ ದಾಸ ಶೆಟ್ಟರು ಆರ್.ಶ್ರೀನಿವಾಸ್ ರಾವ್ ಅವರಿಗೆ ಆ ಜಮೀನನ್ನು ಮಾರಾಟ ಮಾಡಿದ್ದರು. ದಾಸ ಶೆಟ್ಟರು ಚಿಕ್ಕಮಂಚಮ್ಮನವರ ಮಾವನಾಗುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ನಿಪಿ1 ವಂಶವೃಕ್ಷದ ಬಗ್ಗೆ ಏನು ಹೇಳುತ್ತೀರಿ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾಸ ಶೆಟ್ಟರು ಮಾರಾಟ ಮಾಡುವ ಸಮಯದಲ್ಲಿ ಅವರ ಅಣ್ಣ ತಮ್ಮಂದಿರ ನಡುವೆ ವಿಭಾಗಹ ಆಗಿತ್ತ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನೀವು ಆರ್.ಶ್ರೀನಿವಾಸ್‌ರಾವ್ ರವರಿಂದ ಖರೀದಿ ಮಾಡುವ ಕಾಲಕ್ಕೆ ಅವರ ಹೆಸರಿನಲ್ಲಿ ಸದರಿ 5 ಗುಂಟೆ ಸ್ವತ್ತಿನ ಪ್ರತ್ಯೇಕ ಆರ್.ಟಿ.ಸಿ ಏನಾದರು ಇತ್ತ ಎಂದರೆ ಸಾಕ್ಷಿ ಅವರು ಖರೀದಿಸಿದ 3-4 ತಿಂಗಳಿನಲ್ಲಿಯೇ ನಾನು ಅವರಿಂದ ಖರೀದಿಸಿರುತ್ತೇನೆ, ಹಾಗಾಗಿ ಅವರ ಹೆಸರಿಗೆ ಆರ್.ಟಿ.ಸಿ ಆಗಿತ್ತೊ ಇಲ್ಲವೊ ನಾನು ನೋಡಿಲ್ಲ ಎಂದು ಉತ್ತರಿಸುತ್ತಾರೆ. ಸದರಿ 5 ಗುಂಟೆ ಸ್ವತ್ತಿಗೆ ದಾಸ ಶೆಟ್ಟಿಯಾಗಲಿ ಅವರ ಮಕ್ಕಳಾಗಲಿ ಪ್ರತ್ಯೇಕ ಆರ್.ಟಿ.ಸಿ ಮಾಡಿಕೊಂಡಿದ್ದರ ಎಂದರೆ ಸಾಕ್ಷಿ ಮಾಡಿಕೊಂಡಿರಲಿಲ್ಲ, ದಾಸ ಶೆಟ್ಟಿರವರ ಹೆಸರಿನಲ್ಲಿಯೇ ಆರ್.ಟಿ.ಸಿಯಲ್ಲಿಯೇ ಇತ್ತು ಎಂದು ಉತ್ತರಿಸುತ್ತಾರೆ. 1986-87 ರಲ್ಲಿ ಅಲಿನೇಷನ್ ಮಾಡಿಸಿ ನಾನು ಮನೆ ಕಟ್ಟಿಕೊಂಡಿರುತ್ತೇನೆ. ಹಿಂಬಾಗದಲ್ಲಿ ಶೀಟಿನ ಮನೆ, ಮುಂಬಾಗದಲ್ಲಿ ಮೂರು ಅಂಗಡಿ ಮಳಿಗೆಗಳನ್ನು ಕಟ್ಟಿಕೊಂಡಿರುತ್ತೇನೆ. ಈಗ ಮೊದಲನೆ ಅಂತಸ್ತು ಕಟ್ಟಿದ್ದೀರ ಎಂದರೆ ಸಾಕ್ಷಿ ಮೂರು ಅಂಗಡಿ ಮಳಿಗೆ ಪಕ್ಕದಲ್ಲಿ ಈಗ ಆರು ಅಂಗಡಿ ಮಳಿಗೆಗಳನ್ನು ಕಟ್ಟಿದ್ದೇನೆ, ಅವುಗಳ ಮೇಲೆ ವಾಸದ ಮನೆಯನ್ನು ಕಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ಸದರಿ ಕಟ್ಟಡವನ್ನು 2021-22 ನೇ ಸಾಲಿನಲ್ಲಿ ಕಟ್ಟಿರುತ್ತೇನೆ. ಅದಕ್ಕೆ ಯಾವುದೇ ಪ್ಲಾನ್

ಮತ್ತು ಲೈಸೆನ್ಸ್ ಇರುವುದಿಲ್ಲ, ಹಳೆಯ ಅಂಗಡಿ ಮಳಿಗೆಗಳಿಗೆ ಮತ್ತು ಮನೆಗೆ ಲೆಸೆನ್ಸ್ ಇರುತ್ತದೆ ಎಂದು ಉತ್ತರಿಸುತ್ತಾರೆ. ದಾಸ ಶೆಟ್ಟರು ವಾದಿಗಳಿಗೆ ಭಾಗ ಕೊಡದೆ ಮೋಸ ಮಾಡಿ, ಆರ್.ಶ್ರೀನಿವಾಸ್ ರಾವ್ ರವರಿಗೆ ಮಾರಟಮಾಡಿದ್ದಾರೆ, ನೀವು ಆರ್.ಶ್ರೀನಿವಾಸ್ ರಾವ್ ರವರಿಂದ ಆ ಜಮೀನನ್ನು ಕೊಂಡುಕೊಂಡಿದ್ದೀರಿ ಎಂದರೆ ಸಾಕ್ಷಿ ಮೋಸ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಈ ದಾವ ನಡೆಯುತ್ತಿದ್ದರೂ ಸಹ ನೀವು ವಾದಿಯವರಿಗೆ ಮೋಡುವ ಉದ್ದೇಶದಿಂದ ಮನೆಗಳನ್ನು ಕಟ್ಟಿಕೊಂಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.